
ರಾಜಸ್ಥಾನದ
ರಣಥಂಬೋರ್‌ನ ಮಚಲಿ
ಚಿತ್ರ ಕೃಪೆ: ಅಂತರ್ಜಾಲ

ಚಕ್ರಾಧಿಪತ್ಯ ಕಟ್ಟಿಕೊಳ್ಳುವುದು ಸಹಜ. ಆದರೆ ಇಲ್ಲಿ ಬೂಮ್ರಾಂಗ್ ತಾಯಿ ಜೊತೆಗೇ ಇದ್ದುಬಿಟ್ಟ. ಆಕೆಯ ಮೂರು ಹೆರಿಗೆಯಲ್ಲೂ ಜೊತೆಗಿದ್ದ. ‘ಒಡ ಹುಟ್ಟಿದ ತಮ್ಮ–ತಂಗಿಯರನ್ನು ಕಾಪಾಡಿ ಜೋಪಾನ ಮಾಡಿದ. ಹೀಗೆಲ್ಲಾ ಹುಲಿಗಳ ಜೀವನದಲ್ಲಿ ಘಟಿಸುವುದು ಬಲು ಅಪರೂಪವೇ ಹೌದು.

“ಅಜೀರ್ಣವಾದರೆ ಹುಲಿ ಗರಿಕೆ ಹುಲ್ಲು ತಿನ್ನುತ್ತದೆ. ಈ ಘಟನೆ ಕೂಡ ನೋಡಲು ಸಿಗುವುದು ದುಸ್ತರ. ಹುಲಿ ಹುಲ್ಲು ತಿನ್ನಲ್ಲ ಎಂಬ ಗಾದೆ ಮಾತನ್ನೇ ಸುಳ್ಳು ಮಾಡಿದ್ದು ನಮ್ಮ ‘ಬ್ಯಾಕ್‌ವಾಟರ್ ಫೀಮೇಲ್’. ಅದರ ಈ ಪಟವನ್ನೂ ನಾನು ತೆಗೆದಿದ್ದೇನೆ” ಎಂದು ವನ್ಯಜೀವಿ ಪಟಗಾರ ಸಮೀರ್ ಕೋಟೆ ಹೇಳುತ್ತಾರೆ.

ಸ್ಥಳೀಯ ಆದಿವಾಸಿ ಯುವಕನ ಮೇಲೆ ಕಬಿನಿ ರಾಣಿ ಹಲ್ಲೆ ಮಾಡಿದಳು ಎಂದು ಸುದ್ದಿಯಾಯಿತು. ಕೆಲವರು ಹೀಗೆ ಮಾಡಿದ್ದು ಆಕೆಯಲ್ಲವೆಂದೂ ವಾದ ಮಾಡಿದರು. ಕೆಲವರು, ‘ಬಿರು ಬೇಸಿಗೆಯಲ್ಲಿ ಕಬಿನಿಯ ಹಿನ್ನೀರು ಬತ್ತಿದಾಗ ಬಂಡೀಪುರದ ಹುಲಿಗಳು ಕಬಿನಿಯ ಕಡೆಗೆ ಬರುತ್ತವೆ; ನದಿ ಬತ್ತಿದಾಗ ಎರಡೂ ಕಾಡುಗಳ ನಡುವೆ ಉಳಿವ ದಾರಿ ಕೇವಲ ಒಂದು ಕಿಲೋ ಮೀಟರ್ ಅಷ್ಟೆ. ಹೊಸ ಹುಲಿಗಳು ಬಂದು ಆದಿವಾಸಿ ಯುವಕನ ಮೇಲೆ ಎರಗಿವೆ’ ಎನ್ನುತ್ತಾರೆ. ಯಾವುದು ನಿಜ? ಯಾವುದು ಸುಳ್ಳು? ಗೊತ್ತಿಲ್ಲ. ಯಾವುದಕ್ಕೂ ಅವುಗಳ ಸಂಪರ್ಕದಿಂದ ದೂರವಿರುವುದು ಮನುಷ್ಯರಿಗೆ ಕ್ಷೇಮ. ಹುಲಿಗಳಿಗೆ ಶ್ರೇಯಸ್ಸು.

## ಮಹಾರಾಷ್ಟ್ರದ ಕಾಲರ್ ವಾಲಿ

ಈ ಹೆಣ್ಣು ಹುಲಿಗೆ ‘ಮಾತರಮ್’ ಎಂಬ ಹೆಸರೂ ಇದೆ. ತನ್ನ ಜೀವಿತಾವಧಿಯಲ್ಲಿ ಇಪ್ಪತ್ತೊಂಬತ್ತು ಮಕ್ಕಳಿಗೆ ಜನ್ಮ ನೀಡಿದ ಕಾಲರ್ ವಾಲಿ ಹುಲಿ ದಾಖಲೆ ಸೃಷ್ಟಿಸಿದೆ. ಜೊತೆಗೆ ಅಷ್ಟೂ ಮರಿಗಳನ್ನು ಜೋಪಾನ ಮಾಡಿ ಉಳಿಸಿದೆ ಕೂಡ. ಹುಲಿ ಹೆರುವುದು ಮುಖ್ಯವಲ್ಲ. ಶ್ರಮವಹಿಸಿ ತನ್ನ ಮಕ್ಕಳನ್ನು ಶತ್ರುಗಳಿಂದ ಜೋಪಾನ ಮಾಡುವುದು ಮುಖ್ಯ. ಅವುಗಳಿಗೆ ಆಹಾರ ತಂದು ಕೊಡುವುದು ಅತಿ ಮುಖ್ಯ. ಒಂದು ವರ್ಷದ ತನಕ ಬೇಟೆ ಕಲಿಸಿ, ಆನಂತರ ಬೀಳ್ಕೊಡುವುದು ತಾಯಿಯ ಜವಾಬ್ದಾರಿ. ಇದನ್ನು ನಿರ್ವಹಿಸುವುದು ಅಷ್ಟು


ಮಹಾರಾಷ್ಟ್ರದ ಕಾಲರ್ ವಾಲಿ

ಸಲೀಸಲ್ಲ. ಕಾಲರ್ ವಾಲಿ ಈ ಕೆಲಸವನ್ನು ಯಶಸ್ವಿಯಾಗಿ ನಿಭಾಯಿಸಿ ಹೆಸರು ಮಾಡಿದೆ.

ಈಕೆಯ ಶೈಶವಾವಸ್ಥೆಯಿಂದ ಪ್ರೌಢಾವಸ್ಥೆಯವರೆಗಿನ ಪ್ರಯಾಣವನ್ನು ಒಳಗೊಂಡಿರುವ ‘ಸ್ಪೈ ಇನ್ ದಿ ಜಂಗಲ್’ ಎಂಬ ಪ್ರಸಿದ್ಧ ಸಾಕ್ಷ್ಯಚಿತ್ರ ಇದಕ್ಕೆ ಸಾಕ್ಷಿ. ಪೆಂಚ್ ಟೈಗರ್ ರಿಸರ್ವ್‌ನ ಹೃದಯಭಾಗದಲ್ಲಿ ತನ್ನ ಸಾಮ್ರಾಜ್ಯವನ್ನು ಆಕೆ ಕಟ್ಟಿದ ರೀತಿಯೇ ವಿಶಿಷ್ಟ. ಪೆಂಚ್‌ನಲ್ಲಿ ರೇಡಿಯೊ ಕಾಲರ್ ಅಳವಡಿಸಿದ ಮೊದಲ ಹುಲಿ ಕೂಡ ಇವಳೇನೆ. ಹೀಗಾಗಿ ಅವಳು ‘ಕಾಲರ್‌ವಾಲಿ’ ಎಂಬ ಅಡ್ಡಹೆಸರು ಗಳಿಸಿದಳು. ಇಂದು ಆಕೆಯ ಸಂತತಿಯ ಹುಲಿಗಳನ್ನು ಸ್ಥಳಾಂತರ ಮಾಡಿ ಇತರೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇವಳನ್ನು ಪ್ರೀತಿಯಿಂದ ‘ಮಾತರಮ್’ ಎಂದು ಗುರುತಿಸಲಾಗಿದೆ. ಇದರರ್ಥ ‘ಪ್ರೀತಿಯ ತಾಯಿ’ ಎಂದು.

ಜನವರಿ 15, 2022ರಂದು ವೃದ್ಧಾಪ್ಯದ ತೊಡಕುಗಳಿಂದ ಕಾಲರ್ ವಾಲಿ ಕೊನೆಯುಸಿರೆಳೆದಳು. ಕೊನೆಯವರೆಗೂ ಆಳ್ವಿಕೆ ನಡೆಸಿದ ಆ ಪ್ರದೇಶದ ಮಣ್ಣಲ್ಲೇ ಆಕೆಗೆ ಶಾಶ್ವತ ವಿಶ್ರಾಂತಿ ನೀಡಲಾಯಿತು.

ಈ ಬರಹದಲ್ಲಿ ಹೆಚ್ಚಾಗಿ ಹೆಣ್ಣು ಹುಲಿಗಳ ಬದುಕನ್ನು ಕುರಿತೇ ಬರೆಯಲಾಗಿದೆ. ತನ್ನ ಮಕ್ಕಳಿಗಾಗಿ ತಾಯಿ ನಡೆಸುವ ಹೋರಾಟದ ಬದುಕು ಹೇಗಿರುತ್ತದೆ ಎಂಬುದು ಗಮನಿಸಬೇಕಾದ ಮುಖ್ಯ ಸಂಗತಿ. ಜೀವ ಕೊಡುವ ಅವ್ವನ ಪಾತ್ರಕ್ಕೆ ಎಲ್ಲಾ ಕಡೆಯೂ ತ್ಯಾಗವೆಂಬ ಋಣ ಅಂಟಿಕೊಂಡೇ ಇದೆ. ತನ್ನ ಕುಟುಂಬವನ್ನು ಸಾಕಲು ಅಮ್ಮ ಪಡುವ ಪಡಿಪಾಟಲು ಪ್ರಾಣಿಲೋಕದಲ್ಲೂ ತಪ್ಪಿದ್ದಲ್ಲ.

ಪ್ರತಿಕ್ರಿಯಿಸಿ: feedback@sudha.co.in